Mr. SPEAKER.—In spite of the fact that the question does not arise, the reply is given by the Hon'ble Minister just now that he refutes the insinuation.

ಶ್ರೀ ಜಿ. ಶಿವಪ್ಪ.—ಈ ವರ್ಷ ಸೆಲೆಕ್ಟ್ ಮಾಡಿರತಕ್ಕ ಸಹಕಾರ ಸಂಘಗಳು ಸಮರ್ಪಕವಾಗಿ ಕೆಲಸಮಾಡುತ್ತಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಇವು ಶಿಫಾರಸ್ಸು ಆಗಿರುವ ರೀತಿಯನ್ನು ನೋಡಿದರೆ, does it not show that these things have been done now by the influence of some people here, Sir?

Sri T. MARIAPPA.—I do not think so, Sir. Let him pass on the information to me. I will have it checked up in the interest of the co-operative organisations.

Starting of Health Units at Koramangala and Agara Villages, Bangalore South Taluk.

Q.—366. **Sri A. V. NARASIMHA REDDY** (Bangalore South).—

Will the Government be pleased to state:—

(*a*) whether there has been insistent demand to start Health Units at Koramangala and Agara villages of Begur Hobli, Bangalore South Taluk;

(*b*) the steps they have taken to start the Health Units in these two villages;

(*c*) whether they have conducted any survey in those parts?

A.—**Sri R. M. PATIL** (Minister for Health).—

(*a*) Yes.

(*b*) The proposal to start Health Units round about Bangalore which includes these two villages is under consideration of Government.

(*c*) No.

Proposal to open an Occupational Institute at Tumkur.

Q.—401. **Sri G. N. PUTTANNA** (Tumkur).—

Will the Government be pleased to state:—

(*a*) whether it is a fact that there was a proposal to open an Occupational Institute at Tumkur;

(*b*) if so, why the proposal was dropped;

(*c*) whether they are aware that Tumkur District is an agricultural one and majority of the people are poor and that many young students are unable to go for technical studies out of Tumkur;

(*d*) whether they would open an Occupational Institute in the quarters of the Deputy Commissioner which is a huge building and help the poor youngsters of Tumkur and also of the neighbouring Districts?

A.—**Sri V. VENKATAPPA** (Minister for Education).—

(*a*), (*b*), (*c*) and (*d*). The matter is still under consideration.

Sri G. N. PUTTANNA.—Is the Government sanctioning this Occupational Institute at Tumkur shortly?

ಶ್ರೀ ವಿ. ವೆಂಕಟಪ್ಪ.—ತುಮಕೂರು ಹೆಸರನ್ನು ಸಜೆಸ್ಟ್ ಮಾಡಿದ್ದಾರೆ. ಕೇಂದ್ರ ಸರ್ಕಾರದವರು ಈಗ ಒಂದು ಎಕ್ಸ್‌ಪರ್ಟ್ ಕಮಿಟಿಯನ್ನು ಮಾಡಿದ್ದಾರೆ. ಆ ಕಮಿಟಿಯವರು ನಾವು ಸೆಲೆಕ್ಟ್ ಮಾಡಿದ ಹಾಗೆ ತುಮಕೂರಿನಲ್ಲಿಯೂ ಒಂದು ವೃತ್ತಿ ಶಿಕ್ಷಣ ಸಂಸ್ಥೆಯನ್ನು ಕೊಡಬೇಕೆಂದು ಯೋಚನೆ ಮಾಡುತ್ತಿದ್ದಾರೆ.

ಶ್ರೀ ಜಿ. ಎಸ್. ಪುಟ್ಟಣ್ಣ.—ಕೇಂದ್ರ ಸರ್ಕಾರದವರು ಅದನ್ನು ಕೊಡಬೇಕೆಂದು ಹೇಳುತ್ತೀರಿ. ಆದರೆ ಮೈಸೂರು ಸರ್ಕಾರದವರು ಇಂತಹ ಸ್ಥಳಕ್ಕೆ ಅವಶ್ಯಕವಾಗಿ ಬೇಕೆಂದು ಕೇಳಬೇಕಲ್ಲವೇ?

ಶ್ರೀ ವಿ. ವೆಂಕಟಪ್ಪ.—ಮೈಸೂರು ಸರಕಾರದವರು ಈ ತುಮಕೂರಿನ ಹೆಸರನ್ನೂ ಸಹ ಸೂಚಿಸಿದ್ದಾರೆ. ಕೇಂದ್ರ ಸರ್ಕಾರದವರು ಯಾವುದನ್ನು ಸೆಲೆಕ್ಟ್ ಮಾಡಬೇಕು, ಎಲ್ಲಿ ವೃತ್ತಿ ಶಿಕ್ಷಣ ಶಾಲೆ ಅವಶ್ಯಕವೆಂಬುದನ್ನು ಯೋಚನೆ ಮಾಡುತ್ತಿದ್ದಾರೆ.

ಶ್ರೀ ಜಿ. ಎಸ್. ಪುಟ್ಟಣ್ಣ.—ತುಮಕೂರು ಜಿಲ್ಲೆಯ ಹೆಸರನ್ನೂ ಸಹ ಸಜೆಸ್ಟ್ ಮಾಡಿದ್ದೇವೆ ಎಂದು ಈಗ ತಾನೆ ಮಂತ್ರಿಗಳು ಅಪ್ಪಣೆಕೊಟ್ಟರು. ತುಮಕೂರು ಜಿಲ್ಲೆಯ ಹೆಸರನ್ನು ಕೊನೆಯಲ್ಲಿ ತಂದು ಸೇರಿಸಿದರೆ, ಕೇಂದ್ರ ಸರ್ಕಾರದವರು ಆ ಜಿಲ್ಲೆಗೆ ವೃತ್ತಿ ಶಿಕ್ಷಣ ಶಾಲೆಯನ್ನು ಕೊಡುತ್ತಾರೋ ಇಲ್ಲವೋ ಎಂಬುದನ್ನು ನಿರ್ಧಾರವಾಗಿ ತಿಳಿಸುವುದಕ್ಕಾಗುತ್ತದೆಯೇ?

ಶ್ರೀ ವಿ. ವೆಂಕಟಪ್ಪ.—ನಾನು ಆ ಪ್ರಶ್ನೆಗೆ ಉತ್ತರ ಹೇಳುವುದಕ್ಕಾಗುವುದಿಲ್ಲ. ಇದನ್ನು ಕೇಂದ್ರ ಸರ್ಕಾರದವರು ತೀರ್ಮಾನಮಾಡಬೇಕು.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಕೇಂದ್ರ ಸರ್ಕಾರದವರು ತುಮಕೂರಿನಲ್ಲಿ ಒಂದು ವೃತ್ತಿ ಶಿಕ್ಷಣ ಶಾಲೆಯನ್ನು 1954ನೇ ಇಸವಿಯಿಂದಲೂ ತೆರೆಯಬೇಕೆಂದಿರುವಾಗ ಅಲ್ಲಿ ಸರಿಯಾದ ಕಟ್ಟಡವಿಲ್ಲದೇ ಇರುವ ಸನ್ನಿವೇಶವನ್ನು ನಮ್ಮ ಸರ್ಕಾರದವರು ತನಿಖೆ ಮಾಡಿದ್ದಾರೆಯೇ?

ಶ್ರೀ ವಿ. ವೆಂಕಟಪ್ಪ.—ಅದು ನನಗೆ ಗೊತ್ತಿಲ್ಲ. ಕೇಂದ್ರ ಸರ್ಕಾರದಿಂದ ಸೆಕ್ರೆಟರಿಯವರು ಈ ತರಗಳಲ್ಲಿಯೇ ಬಂದಿದ್ದರು. ಅವರಿಗೆ ತುಮಕೂರಿನ ಹೆಸ

(ಶ್ರೀ ವಿ. ವೆಂಕಟಪ್ಪ.)

ರನ್ನೂ ಸಹ ಸೂಚಿಸಿದ್ದೇವೆ. ಎಕ್ಸ್‌ಪರ್ಟ್ ಕಮಿಟಿ ಯವರು ಬಂದಾಗಲೂ ಯಾವ ಯಾವ ಸ್ಥಳದಲ್ಲಿ ವೃತ್ತಿ ಶಿಕ್ಷಣ ಶಾಲೆಗಳನ್ನು ಸ್ಥಾಪಿಸಬೇಕು, ಎಲ್ಲೆಲ್ಲಿ ಅವುಗಳನ್ನು ಸೆಲೆಕ್ಟ್ ಮಾಡಬೇಕೆಂದೂ ಸಹ ಹೇಳಿದ್ದಾರೆ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಮಂತ್ರಿಗಳು ತಮಗೆ ಗೊತ್ತಿಲ್ಲ ಎಂದು ಹೇಳಿದರು. ಕೇಂದ್ರಸರ್ಕಾರದವರು ಈಗಾಗಲೇ ತುಮಕೂರಿನಲ್ಲಿ ಒಂದು ವೃತ್ತಿ ಶಿಕ್ಷಣ ಶಾಲೆಯನ್ನು ತೆರೆಯುವ ವಿಷಯವನ್ನು ಪರ್ಯಾಲೋಚಿಸಿರುವುದನ್ನು ಅವರ ಗಮನಕ್ಕೆ ತರುವುದಕ್ಕೆ ಸಾಧ್ಯವೇ ?

ಶ್ರೀ ವಿ. ವೆಂಕಟಪ್ಪ.—ಅದು ಸಾಧ್ಯವೆಂಬುದು ನನಗೆ ಗೊತ್ತಿಲ್ಲ. ಈಗ ಇಂಡಿಯಾ ಸರ್ಕಾರದವರು ತುಮಕೂರಿನಲ್ಲಿಯೇ ವೃತ್ತಿ ಶಿಕ್ಷಣ ಶಾಲೆಯನ್ನು ಕೂಡ ಬೇಕೆಂದು ಫೈಲಿನಲ್ಲಿ ಏನೂ ನಮೂದಿಸಿಲ್ಲ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ತುಮಕೂರು ಜಿಲ್ಲೆಯಲ್ಲಿ ಯಾವ ಒಂದು ವೃತ್ತಿ ಶಿಕ್ಷಣ ಶಾಲೆಯೂ ಇಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ವಿ. ವೆಂಕಟಪ್ಪ.—ಬಂದಿದೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಹಾಗಾದರೆ ಇಂತಹ ಜಿಲ್ಲೆಗಳಿಗೆ ಪ್ರಾಯಾರಿಟಿ ಕೊಡಬೇಕೆಂದು ಸರ್ಕಾರದವರು ಏನಾದರೂ ಕೇಂದ್ರ ಸರ್ಕಾರಕ್ಕೆ ಶಿಫಾರ್ಸು ಮಾಡಿದ್ದಾರೆಯೇ ?

ಶ್ರೀ ವಿ. ವೆಂಕಟಪ್ಪ.—ವೃತ್ತಿ ಶಿಕ್ಷಣ ಶಾಲೆಗಳು ಇಲ್ಲದೆ ಇರುವ ಜಿಲ್ಲೆಗಳು ಅನೇಕವಿವೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಹಾಗಾದರೆ ತುಮಕೂರು ಹೆಸರು ಸೇರಿಸಿದೆಯೇ ?

ಶ್ರೀ ವಿ. ವೆಂಕಟಪ್ಪ.—ಹೌದು, ಅದರಲ್ಲಿ ತುಮಕೂರಿನ ಹೆಸರೂ ಸಹ ಸೇರಿದೆ. ಆ ಜಿಲ್ಲೆಯಲ್ಲಿ ಏನೇನು ಅನುಕೂಲಗಳನ್ನು ಕಲ್ಪಿಸಬೇಕೆಂಬುದನ್ನು ತೀರ್ಮಾನ ಮಾಡಲು ಪರ್ಯಾಲೋಚನೆಮಾಡುತ್ತಿದ್ದಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತುಮಕೂರಿನಲ್ಲಿ ಒಂದು ವೃತ್ತಿ ಶಿಕ್ಷಣಶಾಲೆಯನ್ನು ತೆರೆಯಬೇಕೆಂದು ಜಿಲ್ಲಾಧಿಕಾರಿಗಳು ಮಾಡಿರುವ ಶಿಫಾರ್ಸುಗಳನ್ನು ನಮ್ಮ ಸರಕಾರದವರು ಬಿಟ್ಟುಬಿಟ್ಟಿದ್ದಾರೆಯೇ ?

ಶ್ರೀ ವಿ. ವೆಂಕಟಪ್ಪ.—ಆ ವಿಷಯ ಫೈಲಿನಲ್ಲಿ ಇಲ್ಲ. ತಾವು ಕೇಳುವ ಪ್ರಶ್ನೆ ನನಗೆ ಗೊತ್ತಿಲ್ಲ. ಇಂಡಿಯಾ ಸರ್ಕಾರಕ್ಕೆ ಸಂಬಂಧಪಟ್ಟ ಸೆಕ್ರೆಟರಿಯವರು ಇಲ್ಲಿಗೆ ಬಂದು ನಮ್ಮ ಸೆಕ್ರೆಟರಿಯವರ ಜೊತೆಯಲ್ಲಿ ಈ ವಿಷಯವನ್ನು ಚರ್ಚೆಮಾಡಿ ಅವರು ಅಂತ್ಯ ತೀರ್ಮಾನವನ್ನು ಕಳುಹಿಸುತ್ತೇವೆಂದು ಹೇಳಿದ್ದಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅದಕ್ಕೆ ಸಂಬಂಧಪಟ್ಟ ಫೈಲ್ ಅವರಲ್ಲಿಲ್ಲವೇ ?

ಶ್ರೀ ವಿ. ವೆಂಕಟಪ್ಪ.—ಅದಕ್ಕೆ ಸಂಬಂಧಪಟ್ಟಂಥ ಫೈಲಿನಲ್ಲಿ ಸದಸ್ಯರು ಹೇಳುವ ವಿಷಯವಿಲ್ಲ.

Sri M. C. NARASIMHAN.—What is the basis on which or the policy involved in regard to making recommendations for starting Occupational Institutes ?

Mr. SPEAKER.—That is outside the scope of the question.

Mr. M. C. NARASIMHAN.—What courses are recommended to be included in this Institute to be started at Tumkur ?

Mr. SPEAKER.—There is no institute at that place in the first instance. ಕೀಗಿರುವಾಗ ತುಮಕೂರಿನ ವೃತ್ತಿ ಶಿಕ್ಷಣಶಾಲೆಯಲ್ಲಿ ಯಾವ ಯಾವ ಕೋರ್ಸುಗಳನ್ನು ಪ್ರಾರಂಭ ಮಾಡುತ್ತೀರಿ ಎಂದು ಕೇಳುವುದು ಸರಿಯೇ ?

Sri G. VENKATAI GOWDA.—Cl. (*b*) of the question is: "if so, why the proposal was dropped"; the reply furnished is: "the matter is still under consideration": I want to know that exactly is under consideration, whether it is the dropping or whether the entire question of starting the occupational institute, that is under consideration. The answer, as it is, is not clear.

Sri V. VENKATAPPA.—It is not the question of dropping. The entire matter is under consideration.

ಶ್ರೀ ಜೆ. ವೆಂಕಟೇಗೌಡ.—ಈ ವಿಷಯ ಪರ್ಯಾಲೋಚನೆಯಲ್ಲಿದೆ, ಡ್ರಾಪ್ ಮಾಡುವ ಪ್ರಶ್ನೆ ಇಲ್ಲ ಎಂದು ಈಗ ತಾನೆ ಮಂತ್ರಿಗಳು ಉತ್ತರ ಕೊಟ್ಟರು. ಆದರೆ ತುಮಕೂರಿನಲ್ಲಿ ಒಂದು ವೃತ್ತಿ ಶಿಕ್ಷಣ ಶಾಲೆಯನ್ನು ಕೊಡಬೇಕು ಎಂಬುದು ಪರ್ಯಾಲೋಚನೆಯಲ್ಲಿದೆಯೇ?

ಶ್ರೀ ವಿ. ವೆಂಕಟಪ್ಪ.—ಈ ವಿಷಯವನ್ನು ಕೇಂದ್ರ ಸರ್ಕಾರದವರು ಪರ್ಯಾಲೋಚಿಸುತ್ತಿದ್ದಾರೆ.

ಶ್ರೀ ಜಿ. ವೆಂಕಟೇಗೌಡ.—ಬೇರೆ ಕಡೆಗಳಲ್ಲಿಯೂ ವೃತ್ತಿ ಶಿಕ್ಷಣ ಶಾಲೆಗಳನ್ನು ಕೊಡಬೇಕೆಂದು ಶಿಫಾರ್ಸುಗಳನ್ನು ಮಾಡಿದ್ದಾರೆ ಎಂಬುದು ವರ್ತಮಾನ ಬಂದಿದೆ. ಅದು ನಿಜವೇ ?

ಅಧ್ಯಕ್ಷರು.—ವರ್ತಮಾನದ ಮೇಲೆ ಪ್ರಶ್ನೆಗಳನ್ನು ಹಾಕಬಾರದು. ಚೆನ್ನಾಗಿ ತಿಳಿದಿರುವ ವಿಷಯಗಳ ಮೇಲೆ ಪ್ರಶ್ನೆಹಾಕಿ ಇಲ್ಲದಿದ್ದರೆ ಅನೇಕ ಸಂಶಯಗಳಿಗೆ ಕಾರಣವಾಗುತ್ತದೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ತುಮಕೂರಿನಲ್ಲಿ ಒಂದು ವೃತ್ತಿ ಶಿಕ್ಷಣ ಶಾಲೆಯನ್ನು ತೆರೆಯಲು ಶಿಫಾರ್ಸು ಮಾಡಿದ್ದೇವೆ ಎಂದು ಈಗ ತಾನೆ ಮಂತ್ರಿಗಳು ಅಪ್ಪಣೆ ಕೊಡಿಸಿದರು. ಅಲ್ಲಿ ಆ ರೀತಿ ವೃತ್ತಿ ಶಿಕ್ಷಣ ಶಾಲೆಯನ್ನು ತೆರೆಯಲು ಏನೇನು ಸೌಲಭ್ಯಗಳಿವೆ ಮತ್ತು ಯಾವ ಬೇಸಿಸ್ ಮೇಲೆ ಕೊಡಬೇಕೆಂದು ಪರ್ಯಾಲೋಚಿಸುತ್ತಿದ್ದೀರಿ ?

ಅಧ್ಯಕ್ಷರು.—ನೀವು ಅಲ್ಲಿ ವೃತ್ತಿ ಶಿಕ್ಷಣ ಶಾಲೆಯನ್ನು ಕೊಡಬಾರದು ಎಂದು ಹೇಳುತ್ತೀರಾ ?

ಶ್ರೀ ವಿ. ವೆಂಕಟಪ್ಪ.—ಕೇಂದ್ರ ಸರ್ಕಾರದವರು ಒಂದು ಎಕ್ಸ್‌ಪರ್ಟ್ ಕಮಿಟಿಯನ್ನು ರಚಿಸಿದ್ದಾರೆ. ಅವರಿಗೆ ಎಲ್ಲೆಲ್ಲಿ ಅವಶ್ಯಕತೆ ಕಂಡು ಬರುತ್ತದೋ ಅಲ್ಲೆಲ್ಲಾ ವೃತ್ತಿ ಶಿಕ್ಷಣ ಶಾಲೆಗಳನ್ನು ಕೊಡುತ್ತಾರೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ತುಮಕೂರಿನಲ್ಲಿ ಏನೇನೋ ಅವಶ್ಯಕತೆಗಳು ಮತ್ತು ಸೌಲಭ್ಯಗಳು ಇರುವುದರಿಂದಲೇ ಅಲ್ಲಿ ಒಂದು ವೃತ್ತಿ ಶಿಕ್ಷಣ ಶಾಲೆಯನ್ನು ತೆರೆಯಲು ಪರ್ಯಾಲೋಚಿಸುತ್ತಿದ್ದೇವೆ ಎಂದು ಹೇಳಿದರು. ಅಂತಹ ಅವಶ್ಯಕತೆಗಳು ತುಮಕೂರಿನಲ್ಲಿ ಏನೇನಿವೆ ?

ಅಧ್ಯಕ್ಷರು.—ತುಮಕೂರಿನಲ್ಲಿ ಅಂತಹ ಅವಶ್ಯಕತೆ ಕಂಡು ಬಂದುದರಿಂದಲೇ ಅಲ್ಲಿ ಒಂದು ವೃತ್ತಿಶಿಕ್ಷಣ ಶಾಲೆಯನ್ನು ತೆರೆಯಲು ಪರ್ಯಾಲೋಚಿಸುತ್ತಿದ್ದಾರೆ.

Sri B. K. PUTTARAMIAH.—Am I not entitled to get an answer, Sir ?

Mr. SPEAKER.—No, you are not entitled to get an answer to that question.

Number of Cattle in Kadur Taluk.

Q.—410. Sri D. H. RUDRAPPA (Kadur).—

Will the Government be pleased to state :—

the number of cattle in Kadur taluk (hobliwise information may be furnished) ?

A.—Sri H. S. RUDRAPPA (Minister for Agriculture).—

	Total Cattle
1. Kasaba Hobli (Kadur) ...	18,083
2. Birur do	9,511
3. Yagati do	15,188
4. Singatagere	15,510
5. Sakrepatna	18,838
6. Hirenallur	13,270
Taluk Total ...	90,400

ಶ್ರೀ ಡಿ. ಹೆಚ್. ರುದ್ರಪ್ಪ.—ನಾನು ಕೇಳಿರುವ ಪ್ರಶ್ನೆಯಲ್ಲಿ ಕೆಲವನ್ನು ಡಿಸ್ ಆಲೋ ಮಾಡಿದ್ದಾರೆಂದು ಹೇಳಿದೆ. ಕಾರಣವೇನು ?

ಶ್ರೀ ಹೆಚ್. ಎಸ್. ರುದ್ರಪ್ಪ.—ಡಿಸ್ ಆಲೋ ಮಾಡುವವನು ನಾನಲ್ಲ.

ಅಧ್ಯಕ್ಷರು.—ಡಿಸ್ ಆಲೋ ಮಾಡಿದ್ದು ನಾನು. ರೂಲ್ಸ್ ಪ್ರಕಾರ ಆ ರೀತಿ ಮಾಡಲಾಗಿದೆ. ವಿವರಗಳನ್ನು ಬೇಕಾದರೆ ಅನಂತರ ತಮಗೆ ಹೇಳುತ್ತೇನೆ. ಆದರೆ ಈಗಿರುವ ಪ್ರಶ್ನೆಯ ಮೇರೆ ಸಪ್ಲಿಮೆಂಟರಿ ಪ್ರಶ್ನೆಗಳನ್ನು ಕೇಳಬಹುದು.

ಶ್ರೀ ಡಿ. ಹೆಚ್. ರುದ್ರಪ್ಪ.—ಹೋಬಳಿವಾರು ದನಗಳ ಸಂಖ್ಯೆಯಲ್ಲಿ ಗೋಮಾಳದ ಸಂಖ್ಯೆಯೂ ಇದೆಯೇ ?

ಶ್ರೀ. ಹೆಚ್. ಎಸ್. ರುದ್ರಪ್ಪ.—ಪ್ರಶ್ನೆಯನ್ನು ಆ ರೀತಿ ಕೇಳಿದಿರುವುದರಿಂದ ಅದಕ್ಕೆ ಸರಿಯಾದ ಉತ್ತರ ಬಂದಿಲ್ಲ. ಒಟ್ಟು 76,576 ಎಕರೆ 14 ಗುಂಟೆ ಗೋಮಾಳವಿದೆ ಎಂದು ನಮಗೆ ತಿಳಿದು ಬಂದಿದೆ.

ಶ್ರೀ ವೈ. ವೀರಪ್ಪ.—ಈ ದನಗಳ ಸಂಖ್ಯೆಯಲ್ಲಿ ಎಮ್ಮೆಗಳೂ ಸೇರಿವೆಯೇ, ಸ್ವಾಮಿ ?

ಶ್ರೀ ಹೆಚ್. ಎಸ್. ರುದ್ರಪ್ಪ.—ಹೌದು.

Release of Waste Lands in the Forest Area for Cultivation.

Q.—500. Sri C. M. ARUMUGHAM (Kolar Gold Fields).—

Will the Government be pleased to state:—

whether they proposed to release some of the waste lands in the forest area for cultivation ?

A.—Sri H. S. RUDRAPPA (Minister for Agriculture).—

In view of the low percentage of Forests in the State, it is not proposed to release any more waste lands from the Forest area for cultivation, except perhaps disjointed small patches in special cases.

Sri C. M. ARUMUGHAM.—May I know, Sir, the amount of forest lands already released for the purpose of cultivation ?

Sri H. S. RUDRAPPA.—Since when ?

Sri C. M. ARUMUGHAM.—From 1947.

Sri H. S. RUDRAPPA.—I want notice. But this much I may say. This question was considerd during 1956 by the then Government and all factors have been taken and some lands have been released from the Forest Department. But I do not know the exact extent.

Sri C. K. RAJAIAH SETTY—In the answer it is stated that no more lands could be released. At least can lands be released for forest plantation ?

Sri H. S. RUDRAPPA.—It is a question of forest growth. I have already said in the Assembly on a previous occasion that if people agree to grow in forest area, we will give them lands on lease basis but not on grant basis.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತಾವು ಈ ಫಾರೆಸ್ಟ್ ಲಾಂಡ್ಸ್‌ಗಳನ್ನು ಮಾಡುವಾಗ, ಕೆಲವು ಕಡೆ ದತ್ತೂರಿಯಂತಹ ಮುಳ್ಳು ಗಿಡಗಳು ಕೂಡ ಬೆಳೆಯುವುದಕ್ಕೆ ಸಾಧ್ಯವಿಲ್ಲದ ಸಾವಿರಾರು ಎಕರೆ ಜಮೀನುಗಳು ಈ ಫಾರೆಸ್ಟ್‌ನಲ್ಲಿವೆ. ಮತ್ತು ಇದರ ಲೆಕ್ಕ ಕೂಡ ಇಲಾಖೆಯಲ್ಲಿದೆ, ಅದನ್ನು ರಿಲೀಸು ಮಾಡುವುದಕ್ಕೆ ಸರಕಾರಕ್ಕೆ ಸಾಧ್ಯವಿಲ್ಲವೇ ?

ಶ್ರೀ ಹೆಚ್ ಎಸ್. ರುದ್ರಪ್ಪ.—ತಮಗೆ ಗೊತ್ತಿರುವ ಹಾಗೆ, ಈ ಸ್ಥಳಗಳಲ್ಲಿಯೂ ಅರಣ್ಯಸಂಪತ್ತನ್ನು ಬೆಳೆಸಬೇಕಾಗುತ್ತದೆ. ಇಂತಹ ಕಡೆಗಳಲ್ಲಿ ಹೆಚ್ಚಿನ ಹಣ ಖರ್ಚು ಮಾಡಬೇಕಾಗಿ ಬರುತ್ತದೆ. ಆದುದರಿಂದ ಹೆಚ್ಚು